**OS: 57/2022**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 07.11.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ನಂಃ 1 ಮತ್ತು 2 ರವರ ಪರ ವಕೀಲರಿಂದ</u>**

ಈ ದಾವೆಯನ್ನು ನನ್ನ ದೊಡ್ಡಪ್ಪನ ಮಕ್ಕಳ ವಿರುದ್ಧ ಭಾಗಾಂಶ ಕೋರಿ ನಾವು ಈ ದಾವೆಯನ್ನು ಸಲ್ಲಿಸಿರುತ್ತೇವೆ. ಪ್ರತಿವಾದಿಗಳು ಸಲ್ಲಿಸಿದ ತಕರಾರು ಪತ್ರದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನನ್ನ ತಾತನ ಹೆಸರು ದೊಡ್ಡ ರಾಜಪ್ಪ. ನನ್ನ ಮುತ್ತಾತನ ಹೆಸರು ನನಗೆ ನಿಖರವಾಗಿ ಗೊತ್ತಿಲ್ಲ. ನನ್ನ ತಾತನ ಹೆಸರಿನಲ್ಲಿ ಒಟ್ಟು 6 ಹೊಲಗಳು ಇವೆ ಆದರೆ ಅವುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರಿನಲ್ಲಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ತಾತ ದೊಡ್ಡ ರಾಜಪ್ಪನ ಹೆಂಡತಿಯ ಹೆಸರು ಓಬಮ್ಮ ಎಂದು ಇರುತ್ತದೆ. ಸದರಿಯವರಿಗೆ ಒಟ್ಟು 5 ಜನ ಮಕ್ಕಳು ಇರುತ್ತಾರೆ ಅವರಲ್ಲಿ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಹೆಣ್ಣು ಮಕ್ಕಳಲ್ಲಿ ಮೊದಲನೇಯವರ ಹೆಸರು ನನಗೆ ಗೊತ್ತಿಲ್ಲ ಅವರು ತೀರಿಕೊಂಡಿದ್ದಾರೆ ಅವರಿಗೆ ಮಕ್ಕಳು ಇರುತ್ತಾರೆ, 2ನೆಯವರು ಮುದ್ದಮ್ಮ ಅವರು ಮೃತಪಟ್ಟಿರುತ್ತಾರೆ ಅವರ ಮಕ್ಕಳು ಇರುತ್ತಾರೆ. ಗಂಡು ಮಕ್ಕಳ ಹೆಸರು ಬಸಪ್ಪ, ಸಿದ್ದಪ್ಪ ಮತ್ತು ಹನುಮಂತಪ್ಪ ಎಂದು ಇರುತ್ತದೆ, ಅವರು ಮೃತಪಟ್ಟಿದ್ದು ಅವರ ಮಕ್ಕಳು ಇರುತ್ತಾರೆ.

ಬಸಪ್ಪನ ಹೆಂಡತಿ ಸೂರಮ್ಮ ಮೃತಪಟ್ಟಿರುತ್ತಾರೆ. ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ ಅವರುಗಳೆಂದರೆ ಕರಿಬಸಪ್ಪ ಮತ್ತು ಅಜ್ಜಯ್ಯ. ಸದರಿಯವರು 4 ಜನ ಸಹೋದರಿಯರು ಇದ್ದಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಸಿದ್ದಪ್ಪನ ಹೆಂಡತಿ ಬೋರಮ್ಮ ಅವರು ಮೃತಪಟ್ಟಿರುತ್ತಾರೆ. ಅವರಿಗೆ ಕುಮಾರಪ್ಪ ಎಂಬ ಮಗ ಇರುತ್ತಾನೆ ಎಂದರೆ ಸರಿ. ಅವರಿಗೆ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆಂದು ನುಡಿಯುತ್ತಾರೆ.

ಹನುಮಂತಪ್ಪನ ಹೆಂಡತಿ ಪಾಪಮ್ಮ ಅವರು ಜೀವಂತ ಇರುತ್ತಾರೆ. ಅವರ ಮಕ್ಕಳು ಈ ದಾವೆಯ ವಾದಿಗಳು 1 ರಿಂದ 5 ರವರು ಆಗಿರುತ್ತಾರೆ. ನನಗೆ 3 ಜನ ಸಹೋದರಿಯರು ಇರುತ್ತಾರೆ. ಅವರ ಹೆಸರು ನಾಗಮ್ಮ, ಗೌರಮ್ಮ, ಕರಿಬಸಮ್ಮ.

ದಾವಾ ಆಸ್ತಿಗಳು ನನ್ನ ಅಜ್ಜನಿಂದ ಬಂದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ 3 ರಿಂದ 5 ರ ಆಸ್ತಿಗಳನ್ನು ನನ್ನ ದೊಡ್ಡಪ್ಪನ ಹೆಸರಿನಲ್ಲಿ ನನ್ನ ಅಜ್ಜ ಖರೀದಿ ಮಾಡಿಸಿರುತ್ತಾರೆ. ಯಾವ ದಿನಾಂಕದಂದು ಮತ್ತು ಯಾರಿಂದ ಖರೀದಿ ಮಾಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಸಂಬಧವಾಗಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಸರ್ಕಾರದಿಂದ ಸದರಿ ಆಸ್ತಿಗಳು ಅಮ್ಮನಕೆರೆ ಬಸಪ್ಪನವರಿಗೆ ಮಂಜೂರು ಆಗಿದ್ದವು ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**